International Journal of Kannada Research
www.kannadajournal.com

ISSN: 2454–5813
IJKR 2018; 4(4): 14-18
© 2018 IJKR
www.kannadajournal.com
Received: 04-08-2018
Accepted: 05-09-2018

**ರೇವತಿ ಸಿ.ಎಂ.**
ಉಪನ್ಯಾಸಕಿ, ಕನ್ನಡ ವಿಭಾಗ,
ಕಾವೇರಿ ಕಾಲೇಜು, ವಿರಾಜಪೇಟೆ,
ಸಂಶೋಧನಾ ವಿದ್ಯಾರ್ಥಿನಿ,
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Correspondence**
**ರೇವತಿ ಸಿ.ಎಂ.**
ಉಪನ್ಯಾಸಕಿ, ಕನ್ನಡ ವಿಭಾಗ,
ಕಾವೇರಿ ಕಾಲೇಜು, ವಿರಾಜಪೇಟೆ,
ಸಂಶೋಧನಾ ವಿದ್ಯಾರ್ಥಿನಿ,
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ಕೊಡಗಿನ ತೆರೆಕಟ್ಟುವ ಆಚರಣೆ ಮತ್ತು ಆರಾಧನಾ ಪರಂಪರೆ

**ರೇವತಿ ಸಿ.ಎಂ.**

ಕೊಡಗಿನ ಸಾಂಸ್ಕೃತಿಕ ಬದುಕಿನೊಳಗೆ ಇಳಿದಾಗ ಅಲ್ಲಿ ಹಲವು ವಿಶಿಷ್ಟ ಆಚರಣೆಗಳನ್ನು ಕಾಣಬಹುದು. ಅದರಲ್ಲಿ ಪ್ರಮುಖವಾದುದು ತೆರೆಕಟ್ಟುವ ಆಚರಣೆ. ಕೊಡಗಿನ ಜನಪದರು ತಾವು ನಂಬಿರುವ ದೈವಗಳನ್ನು ಈ ಆಚರಣೆಯ ಮೂಲಕ ಆರಾಧಿಸುತ್ತಾರೆ. ಇದು ಹಲವು ವಿಧದ ಆರಾಧನೆಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ. "ಒಂದು ಆಚರಣೆಯ ಆಂತರ್ಯದಲ್ಲಿ ಆರಾಧನೆ ಸ್ಥಾಯಿಯಾಗಿ ಉಳಿದಿರುತ್ತದೆ. ಈ ಆಚರಣೆಯೇ ಮತ್ತೊಂದು ಅರ್ಥದಲ್ಲಿ ಆರಾಧನೆಯ ರೂಪವಾಗಿರುತ್ತದೆ"[1]ಎಂಬುದು ಜನಪದ ವಿದ್ವಾಂಸರ ಅಭಿಮತ. ಈ ಹಿನ್ನೆಲೆಯಲ್ಲಿ ತೆರೆಕಟ್ಟುವ ಆಚರಣೆಗಳನ್ನು ಅವಲೋಕಿಸಿದಾಗ ಹಲವು ಆರಾಧನಾ ರೀತಿಗಳ ಸಮನ್ವಯತೆಯನ್ನು ಕಾಣಬಹುದು. ಮಾತೃ ದೇವತಾರಾಧನೆ, ವೃಕ್ಷಾರಾಧನೆ, ಪೂರ್ವಜರ ಆರಾಧನೆ, ಮೃಗಾರಾಧನೆ, ಆಯುಧ ಪೂಜೆ, ಶಕ್ತಿ, ಚಾಮುಂಡಿ, ಶೈವ ಮತ್ತು ವೈಷ್ಣವ ಕಲ್ಪನೆಗಳು ಹಾಗೂ ಫಲವಂತಿಕೆಯ ಪೂಜೆ ಇಲ್ಲಿ ಸಮ್ಮಿಳಿತಗೊಂಡಿವೆ.

### ಮಾತೃ ದೇವತಾರಾಧನೆ

ಮಾತೃತ್ವದ ಕಲ್ಪನೆ ಮತ್ತು ಆರಾಧನೆ ಜಗತ್ತಿನಾದ್ಯಂತ ಅನೇಕ ಪರಂಪರೆಗಳಲ್ಲಿ ಕಂಡುಬರುತ್ತದೆ. ಇದೊಂದು ಉದಾತ್ತವಾದ ಪರಿಕಲ್ಪನೆ. ಮಾತೃ ವಾತ್ಸಲ್ಯಕ್ಕಿಂತ ಮಿಗಿಲಾದುದು ಈ ಜಗತ್ತಿನಲ್ಲಿ ಬೇರೊಂದಿಲ್ಲ. ಮಾತೆ ತನ್ನ ಮಕ್ಕಳ ಯೋಗಕ್ಷೇಮವನ್ನು ನೋಡುವಂತೆ ಮಾತೃದೇವತೆಗಳು ಭಕ್ತರನ್ನು ಅಕ್ಕರೆಯಿಂದ ಸಲಹುತ್ತವೆ ಎಂಬ ನಂಬಿಕೆ ಜನಪದರಿಗಿದೆ. ಮಾತೃದೇವತೆ ಫಲ ಸಮೃದ್ಧಿಯ ಸಂಕೇತವೂ ಹೌದು. ಶಿಲಾಯುಗದಲ್ಲಿ ಫಲ ಸಮೃದ್ಧಿ ದೇವತೆಯಾದ ಮಾತೃ ದೇವತೆಯೇ ಏಕೈಕ ದೈವವಾಗಿದ್ದಳು. ಎಲ್ಲಾ ಪೂಜೆಯೂ ಆಕೆಗೆ ಸಲ್ಲುತ್ತಿತ್ತು. ಜಗತ್ತಿನ ಅತೀ ಪ್ರಾಚೀನ ಪಳೆಯುಳಿಕೆಗಳಲ್ಲಿ ಮಾತೃ ದೇವತೆಯ ವಿಗ್ರಹಗಳು ದೊರೆತಿವೆ. ಪೂರ್ವ ಮೆಡಿಟರೇನಿಯನ್ ಪ್ರದೇಶದ ಉತ್ತರ ಹಾಗೂ ದಕ್ಷಿಣ ದೇಶಗಳು ಮಹಾಮಾತೆಯ ಆರಾಧನಾ ಪಂಥದ ಮೂಲ ನೆಲೆಗಳಾಗಿದ್ದವು. ಈಜಿಪ್ಟ್‌ನ ಅತೀ ಪ್ರಾಚೀನ ದೈವವಾದ ಐಡಿಸ್ ಸಮೃದ್ಧಿ ದೇವತೆಯಾಗಿದ್ದಳು.

ವಿಶ್ವದ ವಿವಿಧ ಜನಾಂಗಗಳ ಸಂಸ್ಕೃತಿಯಲ್ಲಿ ಮಾತೃ ದೇವತೆಗಳ ಆರಾಧನೆಯು ಸಾಮಾನ್ಯ ಅಂಶವಾಗಿ ಕಾಣುತ್ತದೆ. ಪ್ರಾಚೀನ ಗ್ರೀಕರು ಅಥೇನಾ ದೇವತೆಯನ್ನು, ರೋಮನ್ನರು ಮಿನರ್ವಾ ದೇವತೆಯನ್ನು ಮಾತೃ ದೇವತೆಗಳಾಗಿ ಪೂಜಿಸುತ್ತಿದ್ದರು. ಈಜಿಪ್ಟ್‌ನ ಐಸಿಸ್, ಇರಾನಿನ ಅನೂಹಿತಾ, ಗ್ರೀಕಿನ ಆಫ್ರೋಡೈಟಿ, ಆರ್ಟಿಮಿಸ್, ರೋಮ್‌ನ ಡಯಾನ, ವೀನಸ್ ಮಾತೃದೇವತೆಗಳ ಸಾಲಿಗೆ ಸೇರುತ್ತವೆ.

ಭಾರತದಲ್ಲಿ ಮಾತೃದೇವತೆಗಳ ಆರಾಧನೆಯು ಚರಿತ್ರೆಯ ಪೂರ್ವಕಾಲದಲ್ಲಿ ಬಳಕೆಯಲ್ಲಿತ್ತು ಎಂಬುದಕ್ಕೆ ವಿಪುಲವಾದ ಸಾಕ್ಷ್ಯಾಧಾರಗಳು ದೊರಕುತ್ತವೆ. ಸಿಂಧೂ ಕಣಿವೆಯಲ್ಲಿ ದೊರಕಿರುವ ಅನೇಕ ಸ್ತ್ರೀ ವಿಗ್ರಹಗಳು ಮಾತೃದೇವತಾ ಪಂಥಕ್ಕೆ ಸಂಬಂಧಿಸಿವೆ. ಹರಪ್ಪಾ ಸಂಸ್ಕೃತಿಯಲ್ಲಿ ಕುತೂಹಲಕರವಾದ ಮುದ್ರೆಯೊಂದು ದೊರಕಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದರ ಇನ್ನೊಂದು ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಿಂದ ಉಳುಮೆ ಮಾಡುವ ರೈತನಾಗಿದ್ದಾನೆ. ಗರ್ಭದಿಂದ ಹೊರಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯೆಂದು ಗುರುತಿಸಲಾಗಿದೆ.

ಭಾರತದಾದ್ಯಂತ ಆರಾರಾಧನೆಗೆ ಒಳಪಡುವ ಮಾತೃದೇವತೆಗಳಲ್ಲಿ ಹೆಚ್ಚಿನವುಗಳು ಗ್ರಾಮದೇವತೆಗಳಾಗಿವೆ. ಚೀರುಂಬಾ, ಮಾರಮ್ಮ, ದುರುಗಮ್ಮ, ಲಕ್ಕವ್ವ, ಗಾಳೆಮ್ಮ, ಉಡುಚಮ್ಮ, ದ್ಯಾಮವ್ವ ಜನಪದರ ಆರಾಧನೆಗೆ ಒಳಪಡುವ ದೈವಗಳು.

ಕೇರಳದ ತೆಯ್ಯಂ ಆಚರಣೆಯಲ್ಲಿ ಕರಿ ಚಾಮುಂಡಿ, ಕಾಳಿ, ಮುಚ್ಚಿಲೋಟ್ ಭಗವತಿ, ಮಾಕಪೊದಿ, ಮೂವಾಳಂ ಕುಳಿ ಚಾಮುಂಡಿ ಮುಂತಾದ ಮಾತೃದೇವತೆಗಳನ್ನು ಆರಾಧಿಸಲಾಗುತ್ತದೆ. ಕೊಡಗಿನ ತೆರೆಕಟ್ಟುವ ಆಚರಣೆಯಲ್ಲಿ ಮಾತೃ ದೇವತೆಗಳಾದ ಚೌಂಡಿ, ಭದ್ರಕಾಳಿ, ಭಗವತಿ, ನುಚ್ಚುಟೆ, ಪುದಿಯೋದಿ ದೈವಗಳು ಆರಾಧನೆಗೊಳ್ಳುತ್ತವೆ. ದುಷ್ಟರಿಗೆ ಶಿಕ್ಷೆ ಮತ್ತು ಶಿಷ್ಟರ ಸಂರಕ್ಷಣೆ ಈ ದೇವತೆಗಳ ಪ್ರಮುಖ ಲಕ್ಷಣ. ರಕ್ಷಣೆ ಮತ್ತು ಶಿಕ್ಷೆ ಒಂದೇ ಅಂಶವಾಗಿರುವಂತೆ ಸಮೃದ್ಧಿ ಮತ್ತು ನಾಶವು ಒಂದರ ಭಾಗವಾಗಿರುತ್ತದೆ. ಹಾಗಾಗಿ ಒಬ್ಬಳೇ ದೇವಿ ವ್ಯತ್ಯಸ್ತ ರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಇಂತಹ ಮಾತೃದೇವತೆಗಳು ಕೊಡಗಿನಲ್ಲಿ ಆರಾಧನೆಗೊಳ್ಳುತ್ತವೆ. ತೆರೆಕಟ್ಟುವ ಆಚರಣೆಯ ಸಂದರ್ಭದಲ್ಲಿ ಇಲ್ಲಿನ ಕೋಟ, ದೇವಕಾಡು ಹಾಗೂ ದೇವಸ್ಥಾನಗಳಲ್ಲಿ ಇವುಗಳು ಆವೇಶಗೊಳ್ಳುತ್ತವೆ.

ವಿವಿಧ ರೂಪ ಹಾಗು ಭಾವಗಳಲ್ಲಿರುವ ಮಾತೃದೇವತೆಗಳನ್ನು ತೆರೆ ಆಚರಣೆಯಲ್ಲಿ ಆರಾಧಿಸಲಾಗುತ್ತದೆ. ಉಗ್ರ ಸ್ವರೂಪದ ಕರಿ ಚಾವುಂಡಿ, ಭದ್ರಕಾಳಿ ಒಂದೆಡೆ ಆರಾಧನೆಗೊಂಡರೆ; ಸೌಮ್ಯ ಸ್ವರೂಪದ ಭಗವತಿ ದೇವಿಯರ ಉಪಾಸನೆಯನ್ನು ಮತ್ತೊಂದೆಡೆಯಲ್ಲಿ ಕಾಣಬಹುದು. ರೂಪ ಹಾಗೂ ಸ್ವಭಾವ ಒಂದೇ ಆದರೂ, ಭಿನ್ನ ಹೆಸರುಗಳಿರುವ ಗ್ರಾಮದೇವತೆಗಳು ಹಾಗೂ ದೈವಗಳು ಕೊಡಗಿನಲ್ಲಿವೆ. ರೋಗಗಳಿಂದ ರಕ್ಷಿಸುವ ಪುದಿಯೋದಿಯಂತಹ ದೇವಿಯರೂ ಇದ್ದಾರೆ. ಮರಣಾನಂತರ ದೇವತಾ ಸ್ವರೂಪವನ್ನು ಪಡೆದ ನುಚ್ಚುಟೆಯಂತಹ ಸ್ತ್ರೀದೈವಗಳು ತೆರೆ ಕಟ್ಟಿ ಆರಾಧಿಸಲ್ಪಡುತ್ತವೆ.

**ವೃಕ್ಷಾರಾಧನೆ**

ಜನಪದರು ಪ್ರಕೃತಿ ಆರಾಧಕರು. ನಿಸರ್ಗದ ಪ್ರತಿಯೊಂದು ಅಂಶಗಳಲ್ಲಿ ದೈವಿಕ ಸ್ವರೂಪವನ್ನು ಕಾಣುವವರು. ದೈವೀ ಶಕ್ತಿಗಳು ವೃಕ್ಷಗಳಲ್ಲಿ ವಾಸವಾಗಿವೆ ಎಂಬ ನಂಬಿಕೆ ವೃಕ್ಷಾರಾಧನೆಯ ಹಿಂದಿದೆ. ತೆರೆಕಟ್ಟುವ ಆಚರಣೆಯಲ್ಲಿಯೂ ಇದೇ ನಂಬಿಕೆ ಪ್ರತಿಫಲಿಸುತ್ತದೆ. ಕೊಡಗಿನ ಪ್ರತೀ ಗ್ರಾಮಗಳಲ್ಲಿ ದೇವಕಾಡುಗಳು ಹಾಗೂ ಬನಗಳೆಂಬ ರಕ್ಷಿತಾರಣ್ಯಗಳಿವೆ. ಇಲ್ಲಿನ ಪ್ರತಿಯೊಂದು ಮರಗಳಲ್ಲಿ ದೈವಗಳು ನೆಲೆಸಿದ್ದು ಅವುಗಳನ್ನು ಕಡಿಯಬಾರದೆಂಬ ಅಲಿಖಿತ ನಿಯಮವಿದೆ. ಹಬ್ಬ ಹಾಗೂ ತೆರೆಆಚರಣೆಯ ವಿಶೇಷ ಸಂದರ್ಭಗಳನ್ನು ಹೊರತು ಪಡಿಸಿ ಉಳಿದ ದಿನಗಳಂದು ಜನರ ಪ್ರವೇಶ ನಿಷಿದ್ಧವಾಗಿದೆ.

ಆಯಾ ದೈವಗಳು ನೆಲೆಸಿರುವ ದೇವಕಾಡು ಹಾಗು ಬನಗಳನ್ನು ದೈವಗಳ ಹೆಸರಿನಿಂದಲೇ ಕರೆಯುತ್ತಾರೆ. ಅಯ್ಯಪ್ಪ ದೇವರ ಕಾಡು, ಚಾವುಂಡಿ ಬನ, ಸಾಸ್ತಾವು ಬನ ಹೀಗೆ ಊರಿಗೊಂದು ದೇವರಕಾಡು ಅಥವಾ ಬನಗಳು ಕೊಡಗಿನಲ್ಲಿವೆ. ಈ ದೈವಗಳು ಹಾಲು ಒಸರುವ ಮರಗಳಲ್ಲಿ ವಾಸವಾಗಿರುತ್ತವೆ ಎಂಬುದು ಜನಪದರ ನಂಬಿಕೆ. ಹಲಸು, ಗೋಳಿ ಹಾಗೂ ಮಾವಿನ ಮರದಡಿಯಲ್ಲಿ ಅವುಗಳ ಸ್ಥಾನವಿರುತ್ತವೆ. ಕೆಲವೊಮ್ಮೆ ಮರದಡಿಯಲ್ಲಿ ಒಂದು ಕಲ್ಲು ಮಾತ್ರ ಇರುತ್ತದೆ. ಕೆಲವು ನೆಲೆಗಳಲ್ಲಿ ಮರದ ಸುತ್ತಲೂ ಕಟ್ಟೆಗಳಿರುತ್ತವೆ. ತೆರೆಕಟ್ಟುವ ಸಂದರ್ಭದಲ್ಲಿ ತೆರೆ ವೇಷಧಾರಿಗಳು ಈ ಸ್ಥಾನಗಳಿಗೆ ಬಂದು ನಮಸ್ಕರಿಸಿ ತನ್ನ ಮುಂದಿನ ವಿಧಿವಿಧಾನಗಳನ್ನು ನಡೆಸುತ್ತಾರೆ. ವಿರಾಜಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ನಡೆಯುವ ಚೌಂಡಿ ತೆರೆಯಲ್ಲಿ ಚೌಂಡಿ ದೈವವು ಆವಾಹನೆಯಾದ ನಂತರ ತನ್ನ ನೆಲೆಯಾದ ಹಲಸಿನ ಮರದಡಿಗೆ ತೆರಳುತ್ತದೆ. ಮರವನ್ನು ಏರಿ ಹಲಸನ್ನು ಕಿತ್ತು ಬಾಯಲ್ಲಿ ಕಚ್ಚಿ ಹೊತ್ತುಕೊಂಡು ಬರುತ್ತದೆ. ನೆಲೆಯನ್ನು ಅರಸಿ ಕೊಡಗಿಗೆ ಬಂದ ಸಂದರ್ಭದಲ್ಲಿ ಈ ದೈವವು ಹಲಸಿನ ಹಣ್ಣನ್ನು ತಿಂದು ತನ್ನ ಹಸಿವನ್ನು ನೀಗಿಸಿಕೊಂಡಿತು ಎಂಬುದು ಇದರ ಹಿಂದಿರುವ ನಂಬಿಕೆಯಾಗಿದೆ.

**ಪೂರ್ವಜರ ಆರಾಧನೆ**

ಜಗತ್ತಿನ ಎಲ್ಲೆಡೆ ಹಿರಿಯರ ಆರಾಧನೆ ಕಂಡುಬರುತ್ತದೆ. ಉಗಾಂಡ, ಜಪಾನ್, ಆಸ್ಟ್ರೇಲಿಯಾ ಹಾಗು ದ್ರಾವಿಡ ಪ್ರದೇಶಗಳಲ್ಲಿ ವಿಭಿನ್ನ ರೀತಿಯಲ್ಲಿ ಪಿತೃಗಳ ಆರಾಧನೆಯಿದೆ. ಕೊಡಗಿನ ಕೊಡವರು ಪೂರ್ವಜರ ಆರಾಧಕರು. ವಂಶದ ಹಿರಿಯನನ್ನು ಕಾರೋಣ ಎಂದು ಕರೆಯುತ್ತಾರೆ. ಈತ ಐನ್‌ಮನೆ ಅಥವಾ ಕೈಮಡಗಳಲ್ಲಿ ನೆಲೆಸಿರುತ್ತಾನೆ. ಶುಭಾಶುಭ ಕಾರ್ಯಗಳನ್ನು ಕಾರೋಣನನ್ನು ಪ್ರಾರ್ಥಿಸಿ ದೀಪಕ್ಕೆ ಅಕ್ಕಿ ಹಾಕಿ ಆರಂಭಿಸಲಾಗುತ್ತದೆ. ತೆರೆ ಆಚರಣೆಯಲ್ಲಿ ಪೂರ್ವಜರ ಆರಾಧನೆ ಎರಡು ವಿಧಗಳಲ್ಲಿ ನಡೆಯುತ್ತದೆ. ಪ್ರತಿಯೊಂದು ಕುಟುಂಬವು ತನ್ನ ಮೂಲ ಪುರುಷನನ್ನು ಕಾರೋಣ ತೆರೆಕಟ್ಟುವುದರ ಮೂಲಕ ಆರಾಧಿಸುತ್ತದೆ. ಈ ಸಂದರ್ಭದಲ್ಲಿ ಕಾರೋಣ ತೆರೆಕಾರನ ಮೈಮೇಲೆ ಆವಾಹನೆಯಾದಾಗ ಕುಟುಂಬದ ಸದಸ್ಯರಿಗೆ ಹಿರಿಯನಂತೆ ಉಪದೇಶವನ್ನು ನೀಡುತ್ತದೆ. ಎಲ್ಲರೂ ಒಂದಾಗಿ ಬಾಳುವಂತೆ ಹರಸುತ್ತದೆ.

ವೀರತ್ವ, ದುರಂತ ಮತ್ತು ದೈವತ್ವ ಕೊಡಗಿನ ಸಂಸ್ಕೃತಿಯಲ್ಲಿ ಸಾಮಾನ್ಯ ವಿದ್ಯಮಾನವಾಗಿದೆ. ಸಮಾಜದ ಒಳಿತಿಗಾಗಿ ತನ್ನ ಬದುಕನ್ನೇ ಸಮರ್ಪಿಸಿದವನು ವೀರ. ಇಂತಹ ವ್ಯಕ್ತಿಯನ್ನು ಕೊಡವ ಜನಪದರು ಕೊಡಿಬೀರ, ಬೀರ, ಅಜ್ಜಪ್ಪ ಎಂದು ಕರೆಯುತ್ತಾರೆ. ಕೊಡವ ಜನಾಂಗವು ಇವರನ್ನು ವೀರರೆಂದು ಅಂಗೀಕರಿಸಿ ದೈವಗಳಾಗಿ ಆರಾಧಿಸುತ್ತದೆ. ಆಯಾ ಕುಟುಂಬ, ಊರು ಅಥವಾ ನಾಡಿನ ರಕ್ಷಣೆಗಾಗಿ ಹೋರಾಡಿ ದುರಂತ ಮರಣವನ್ನಪ್ಪಿದ ವೀರರಾದ ಕನ್ನಂಡ ಪಡೆಬೀರ, ಅಪ್ಪಚ್ಚಿರ ಮಂದಣ್ಣ ಮುಂತಾದ ವೀರರು ಆಯಾ ಕುಟುಂಬಗಳಲ್ಲಿ ತೆರೆಕಟ್ಟುವ ಆಚರಣೆಯ ಮೂಲಕ ಆರಾಧಿಸಲ್ಪಡುತ್ತಾರೆ.

ವೀರನೂ ಮಂತ್ರ ತಂತ್ರಗಳಲ್ಲಿ ನಿಷ್ಣಾತನೂ ಆದ ಕಲ್ಯಾಟಂಡ ಪೊನ್ನಪ್ಪನೆಂಬ ವೀರನನ್ನು ಕೊಡಗಿನ ಹಲವು ಕೊಡವ ಕುಟುಂಬಗಳು ಅಜ್ಜಪ್ಪನೆಂದು ಆರಾಧಿಸುತ್ತಾರೆ. ಐತಿಹ್ಯದ ಪ್ರಕಾರ ಕಲ್ಯಾಟಂಡ ಪೊನ್ನಪ್ಪ ನಾಪೋಕ್ಲು ನಾಡಿನವನು. ಈತನ ತಂದೆ ಕುಟ್ಟಯ್ಯ ತಾಯಿ ಚೀಯಮ್ಮ. ಇಗ್ಗ್‌ತಪ್ಪ ದೇವರ ಕೃಪೆಯಿಂದ ಜನಿಸಿದವನು ಪೊನ್ನಪ್ಪ. ಮಲಬಾರ್ ಪ್ರಾಂತ್ಯಕ್ಕೆ ತೆರಳಿದ ಆತ ಅಲ್ಲಿ ಮಂತ್ರವಿದ್ಯಾ ಪಾರಂಗತನಾಗಿ ಪತ್ತ್‌ಕೂಟ ಪಾತಾಳನನ್ನು ತನ್ನ ಜೊತೆಗಾರನಾಗಿಸಿಕೊಳ್ಳುವನು. ಮಂತ್ರ ವಿದ್ಯೆ ಕಲಿತಿದ್ದ ಕಾಟಾಳ ಬೊಳ್ತು ಈತನ ಆತ್ಮೀಯ ಸ್ನೇಹಿತ. ತನ್ನ ಕೊಟ್ಟಿಗೆಯ ಮೂವತ್ತಾರು ದನಗಳನ್ನು ಮೇಯಿಸಲೆಂದು ಹೋದ ಇಬ್ಬರೂ ಹಕ್ಕಿ ಬೇಟೆಯಲ್ಲಿ ತಲ್ಲೀನರಾಗಿ ದನಗಳನ್ನು ಮರೆತರು. ಬೆಳೆದು ನಿಂತ ಗದ್ದೆಯನ್ನು ದನಗಳು ಮೇಯುತ್ತಿದ್ದವು. ಇದರಿಂದ ತೀವ್ರ ಆಕ್ರೋಶಗೊಂಡ ಪೊನ್ನಪ್ಪನ ತಂದೆ ಆತನ ಬಿದಿರಿನ ಬಿಲ್ಲನ್ನು ಮುರಿದು ಅಂಗಳಕ್ಕೆ ಬಿಸುಟ್ಟನು. ದುಃಖಿತನಾದ ಪೊನ್ನಪ್ಪ ತನ್ನ ಸ್ನೇಹಿತ ಕಾಟಾಳ ಬೊಳ್ತುವಿನೊಂದಿಗೆ ಮನೆಯನ್ನು ತ್ಯಜಿಸಿ ಹೊರಟನು. ತಾಯಿ ಚೀಯಮ್ಮ, ಊರು ಮತ್ತು ನಾಡಿನ ಜನರು ನಾನಾ ಪರಿಯಾಗಿ ಬೇಡಿಕೊಂಡರೂ ತನ್ನ ನಿರ್ಧಾರ ಬದಲಿಸಲಿಲ್ಲ. ಕಾವೇರಿ ಮಾತೆಯ ದೇಗುಲದ ಮುಂದೆ ತಾನು ಬಾಳುವೆನೆಂದು ನಿರ್ಧರಿಸಿ ತಾವುನಾಡು ಎಂಬಲ್ಲಿಗೆ ತೆರಳಿದನು. ವಿಚಾರ ಅರಿತ ತಾವುನಾಡಿನ ನಾಯಕ ಕರ್ಣಯ್ಯ(ಕರ್ಣಂಬಾಹು) ತನ್ನನ್ನು ಭೇಟಿಯಾಗುವಂತೆ ಪೊನ್ನಪ್ಪನಿಗೆ ಆಹ್ವಾನ ನೀಡುವನು. ಆಹ್ವಾನವನ್ನು ತಿರಸ್ಕರಿಸಿ ವಿರೋಧ ಕಟ್ಟಿಕೊಂಡ ಪೊನ್ನಪ್ಪ ಆತನೊಂದಿಗೆ ಹೋರಾಡುವನು. ಕರ್ಣಂಬಾಹುವಿನ ಸಂಚಿನಿಂದ ಕೀಕಂಡ ಕುಟುಂಬದ

ಅಜ್ಜಿಯೊಬ್ಬಳು ಪೊನ್ನಪ್ಪನಿಗೆ ವಿಷಪ್ರಾಷನ ಮಾಡುವಳು. ಆದರೂ ಅಂತಿಮ ಕ್ಷಣದವರೆಗೆ ಹೋರಾಡಿ ವೀರ ಮರಣ ಹೊಂದುವನು. ಹೀಗೆ ವೀರತನದಿಂದ ಖ್ಯಾತನಾದ ಪೊನ್ನಪ್ಪನನ್ನು ಕೊಡಗಿನ ಹಲವು ಕೊಡವ ಕುಟುಂಬಗಳು ಅಜ್ಜಪ್ಪನೆಂಬ ಹೆಸರಿನಲ್ಲಿ ತೆರೆಕಟ್ಟಿ ಆರಾಧಿಸುತ್ತಾರೆ. ಈತನಿಗೆ ಹಲಸಿನ ಮರದಡಿಯಲ್ಲಿ ನೆಲೆಯನ್ನು ನೀಡಿ ವಾರ್ಷಿಕವಾಗಿ ಕೋಳಿಬಲಿಯನ್ನು ನೀಡುತ್ತಾರೆ. ಐನ್‌ಮನೆಗಳಲ್ಲಿ ಈತನ ಆಯುಧವಾದ ಗೆಜ್ಜೆತಂಡ್(ಗೆಜ್ಜೆಕೋಲು) ಇರುತ್ತದೆ. ಇದನ್ನು ಅತ್ಯಂತ ಪೂಜ್ಯನೀಯ ಭಾವದಿಂದ ಆರಾಧಿಸಲಾಗುತ್ತದೆ. ಮದುವೆಯ ಸಂದರ್ಭದಲ್ಲಿ ಅಲಂಕೃತಗೊಂಡ ಮದುಮಗನು ಕೈಯಲ್ಲಿ ಈ ಗೆಜ್ಜೆತಂಡ್ ಹಿಡಿದು ಮುಹೂರ್ತ ನಡೆಯುವ ಸ್ಥಳಕ್ಕೆ ಆಗಮಿಸುವ ಸಂಪ್ರದಾಯ ಇದೆ.

**ಮೃಗಾರಾಧನೆ**

ಕೊಡಗಿನ ತೆರೆಕಟ್ಟುವ ಆಚರಣೆಗಳಲ್ಲಿ ಮೃಗಗಳ ಆರಾಧನೆ ಗಮನೀಯವಾದುದು. ದುರಂತ ಸಾವಿಗೀಡಾದ ದನವನ್ನು ಎತ್ತ್ ತೆರೆಯ ಮೂಲಕ ಆರಾಧಿಸಲಾಗುತ್ತದೆ. ಗ್ರಾಮದ ಜನರಿಗೆ ಉಪಟಳ ನೀಡುತ್ತಿದ್ದ ಹುಲಿಯನ್ನು ಕೊಂದು ಅದನ್ನು ಅಲೌಕಿಕ ರೂಪದಲ್ಲಿ ಆರಾಧಿಸುವ ಕ್ರಮವೂ ಕೊಡಗಿನಲ್ಲಿದೆ. ಇದನ್ನು ನರಿಪೂದ ತೆರೆ ಎಂದು ಕರೆಯುತ್ತಾರೆ.

ಪೂರ್ವದಲ್ಲಿ ಅರಣ್ಯವಾಸಿಯಾಗಿದ್ದ ಮಾನವ ತನ್ನ ಬದುಕನ್ನು ಸುಗಮಗೊಳಿಸಿಕೊಳ್ಳುವುದಕ್ಕಾಗಿ ಪ್ರಕೃತಿಯೊಡನೆ ಹೋರಾಡಬೇಕಾದ ಅನಿವಾರ್ಯತೆ ಇತ್ತು. ನಿಸರ್ಗದ ಅದಮ್ಯ ಶಕ್ತಿಗಳನ್ನು ವಿವಿಧ ಆಚರಣೆಗಳ ಮೂಲಕ ಆರಾಧಿಸಿ ಓಲೈಸಲಾಗುತ್ತಿತ್ತು. ಆ ಮೂಲಕ ಅವುಗಳ ಮೇಲೆ ಪ್ರಭುತ್ವ ಸಾಧಿಸುವ ಪ್ರಯತ್ನದ ಅಂಗವಾಗಿ ಮೃಗಗಳ ಆರಾಧನೆ ರೂಢಿಗೆ ಬಂದಿತು. ಪ್ರಮುಖವಾಗಿ ಬೇಟೆಯ ಬದುಕು ಹಾಗೂ ಕೃಷಿ ಸಂಸ್ಕೃತಿಯ ಹಿನ್ನೆಲೆಯಿಂದ ಪ್ರಾಣಿ ಮೂಲದೈವಗಳ ಆರಾಧನೆ ರೂಢಿಗೆ ಬಂದಿತು. ನಿಸರ್ಗದಿಂದ ಮೈತಳೆದಂತಹ ಇಂಥ ದೈವಗಳನ್ನು ಕ್ರಮೇಣ ಪುರಾಣ ಮೂಲದ ಕಥೆಗಳಿಗೆ ತಳುಕು ಹಾಕಿದ ಸಂದರ್ಭವೂ ಇದೆ. ಆದರೆ ಜನಪದ ಮೂಲದ ಕಥೆಗಳು ಊರ್ಜಿತವಾಗಿದ್ದು ಅವುಗಳ ಸಹಜ ಹಿನ್ನೆಲೆಯತ್ತ ಬೊಟ್ಟು ಮಾಡುತ್ತವೆ.

ತೆರೆಕಟ್ಟುವ ಆಚರಣೆಯಲ್ಲಿ ಆರಾಧಿಸಲ್ಪಡುವ ಎತ್ತ್‌ತೆರೆ ಎತ್ತಿನ ಅಂತರ್ಯಾಮಿ ಶಕ್ತಿಯ ಪ್ರತೀಕವಾಗಿದೆ. ಕೊಡವ ಭಾಷೆಯಲ್ಲಿ ಎತ್ತ್ ಎಂದರೆ ದನ ಎಂದರ್ಥ. ದುರಂತ ಮರಣಕ್ಕೆ ಈಡಾದ ದನಕ್ಕೆ ದೈವತ್ವವನ್ನು ಆರೋಪಿಸಿ ಎತ್ತ್‌ತೆರೆ ಕಟ್ಟಿ ಆರಾಧನೆ ಮಾಡಲಾಗುತ್ತದೆ. ಕೊಡಗಿನಲ್ಲಿ ಪ್ರಮುಖವಾಗಿ ವಿರಾಜಪೇಟೆ ತಾಲೂಕಿನ ಕೋಕೇರಿ ಗ್ರಾಮದ ಚೇನಂಡ ಕುಟುಂಬ ಹಾಗೂ ಕರಡ ಗ್ರಾಮದ ನಡಿಕೇರಿಯಂಡ ಕುಟುಂಬಗಳು ಎತ್ತ್‌ತೆರೆ ಆಚರಣೆಯನ್ನು ನಡೆಸುತ್ತವೆ. ಜನಪದ ಐತಿಹ್ಯದ ಪ್ರಕಾರ ಚೇನಂಡ ಕುಟುಂಬದವರ ಪಾಪುಲಿ ಎಂಬ ಹೆಸರಿನ ಎತ್ತು ಕೇರಳದ ಪಯ್ಯಾವೂರಿನ ದೇವಸ್ಥಾನಕ್ಕೆ ಎತ್ತ್‌ಪೋರ್(ಎತ್ತಿನ ಹೇರು) ಹೊತ್ತು ಸಾಗುತ್ತಿತ್ತು. ವಾಡಿಕೆಯಂತೆ ಪ್ರತೀವರ್ಷವೂ ಎತ್ತ್‌ಪೋರ್ ಒಪ್ಪಿಸಿ ಬರುತ್ತಿದ್ದ ಪಾಪುಲಿ ಮಾರ್ಗಮಧ್ಯದಲ್ಲಿ ಹುಲಿಯ ಧಾಳಿಗೆ ತುತ್ತಾಯಿತು. ಹಲವು ದಿನಗಳು ಕಳೆದರೂ ಎತ್ತು ಮರಳಿ ಬಾರದಿದ್ದಾಗ ಮಾಲಿಕ ಚಿಂತಾಕ್ರಾಂತನಾದನು. ಹಿರಿಯರ ಸಲಹೆಯಂತೆ ಕಾರೋಣನನ್ನು ಪ್ರಾರ್ಥಿಸಿದನು. ತನ್ನ ಎತ್ತು ಮರಳಿ ಬಂದರೆ ಎತ್ತ್‌ತೆರೆ ಕಟ್ಟಿ ಆರಾಧಿಸುತ್ತೇನೆ ಎಂದು ಹರಕೆ ಹೊತ್ತುಕೊಂಡನು. ಪವಾಡ ಎಂಬಂತೆ ಗಾಯಗೊಂಡು ನಿತ್ರಾಣವಾಗಿದ್ದ ಪಾಪುಲಿ ಎತ್ತು ಮರಳಿ ಬಂದು ಕುಟುಂಬದ ಐನ್‌ಮನೆಯ ಮುಂಭಾಗದಲ್ಲಿ ಕೊನೆಯುಸಿರೆಳೆಯಿತು. ಅದರ ಸ್ಮರಣಾರ್ಥ ಎರಡು ವರ್ಷಗಳಿಗೊಮ್ಮೆ ಕುಟುಂಬದ ಐನ್‌ಮನೆಯಲ್ಲಿ ಎತ್ತ್‌ತೆರೆಯನ್ನು ಕಟ್ಟಿ ಆರಾಧಿಸಲಾಗುತ್ತದೆ.

ಎತ್ತ್‌ತೆರೆ ಕಟ್ಟುವುದಕ್ಕೆ ಮುನ್ನ ಆಚರಣೆಗೆ ಅವಶ್ಯಕವಾದ ಎತ್ತಿನ ಪ್ರತಿಕೃತಿಯನ್ನು ನಿರ್ಮಿಸಬೇಕು. ತೂರಬೆತ್ತ(ಕಿರುಬಿದಿರು)ದಿಂದ ಹೊಟ್ಟೆಯ ಆಕಾರವನ್ನು ನಿರ್ಮಿಸಲಾಗುತ್ತದೆ. ಇದು ತೊಟ್ಟಿಲಿನ ಆಕಾರದಲ್ಲಿರುತ್ತದೆ. ಅದಕ್ಕೆ ಬಿಳಿಯ ವರ್ಣದ ಬಟ್ಟೆಯನ್ನು ಹೊದಿಸಿ ಹೊಲಿದು ಎತ್ತಿನ ಹೊಟ್ಟೆಯ ಭಾಗವನ್ನು ಪೂರ್ಣಗೊಳಿಸಲಾಗುತ್ತದೆ. ಒಣ ಹುಲ್ಲನ್ನು ಬಳಸಿ ಎತ್ತಿನ ತಲೆ ಹಾಗೂ ಕೊಂಬನ್ನು ನಿರ್ಮಿಸಿ ಅದನ್ನು ಬಿಳಿ ಬಟ್ಟೆಯಿಂದ ಸುತ್ತುತ್ತಾರೆ. ಬಟ್ಟೆಯಿಂದಲೇ ಎತ್ತಿನ ಬಾಲವನ್ನು ನಿರ್ಮಿಸಲಾಗುತ್ತದೆ. ಅಡಿಕೆ ಹಾಳೆಯಿಂದ ತಯಾರಿಸಲಾದ ಮುಖವಾಡವನ್ನು ಮುಂಭಾಗಕ್ಕೆ ಕಟ್ಟಿದರೆ ಎತ್ತಿನ ಪ್ರತಿಕೃತಿ ಪೂರ್ಣಗೊಳ್ಳುತ್ತದೆ. ಮುಖಕ್ಕೆ ಬಣ್ಣಹಚ್ಚಿ ಸಿದ್ಧಗೊಂಡ ತೆರೆ ಕಲಾವಿದನು ನೆಲ್ಲಕ್ಕಿ ನಡುಬಾಡೆಗೆ ಆಗಮಿಸುತ್ತಾನೆ. ಅಲ್ಲಿ ಉರಿಯುತ್ತಿರುವ ದೀಪದ ಮುಂದೆ ನಿಂತು ಪ್ರಾರ್ಥಿಸುತ್ತಾನೆ. ನೆರೆದವರೆಲ್ಲರೂ ಪ್ರಾರ್ಥಿಸಿ ಅಕ್ಕಿ ಹಾಕುತ್ತಾರೆ. ತೆರೆಕಟ್ಟುವ ಕಲಾವಿದನು ಸಿದ್ಧಗೊಂಡಿರುವ ಎತ್ತಿನ ಪ್ರತಿಕೃತಿಯೊಳಗೆ ಮೈತೂರಿಸಿ ಸಹಾಯಕರ ನೆರವಿನೊಂದಿಗೆ ಹೊತ್ತುಕೊಳ್ಳುತ್ತಾನೆ. ಅಷ್ಟರಲ್ಲಿ ಸಾಂಪ್ರದಾಯಿಕ ದುಡಿ ವಾದ್ಯವನ್ನು ಬಾರಿಸುತ್ತಾ ಕೊಡವ ಜನಪದರು ಹಾಡಲಾರಂಭಿಸುತ್ತಾರೆ. “ಲೆಲ್ಲಲೇಲೋ ಲೆಲ್ಲೆಲಾ ಲೆಲ್ಲೆಲೇಲೋ ಲೆಲ್ಲೆಲಾ” ಎಂಬ ಸೊಲ್ಲಿನೊಂದಿಗೆ ಪ್ರಾರಂಭವಾಗುವ ಈ ಗೀತೆಯನ್ನು ‘ಎತ್ತ್‌ಪಾಟ್’(ಎತ್ತಿನ ಹಾಡು) ಎಂದು ಕರೆಯುತ್ತಾರೆ. “ಎತ್ತಿನ ಹೇರಿನೊಂದಿಗೆ ಚೋಮ್ಮಣಿ ಎಂಬ ಎತ್ತು ಪಯ್ಯಾವೂರು ದೇವಸ್ಥಾನಕ್ಕೆ ಹೋಯಿತು. ಮಾರ್ಗಮಧ್ಯೆ ಹುಲಿಯ ಧಾಳಿಗೊಳಗಾಯಿತು. ಎತ್ತಿನ ಯಜಮಾನ ಕುಟುಂಬದ ಕಾರೋಣನನ್ನು ಪ್ರಾರ್ಥಿಸಿದನು. ತನ್ನ ಎತ್ತು ಮರಳಿ ಬಂದರೆ ಎತ್ತ್ ತೆರೆ ಕಟ್ಟಿ ಆರಾಧಿಸುತ್ತೇನೆ ಎಂದು ಹರಕೆ ಹೊತ್ತುಕೊಂಡನು. ಕಾರೋಣನ ಮಹಿಮೆಯಿಂದ ಗಾಯಗೊಂಡು ನಿತ್ರಾಣವಾಗಿದ್ದ ಎತ್ತು ಮರಳಿ ಮನೆಗೆ ಬಂದು ಐನ್‌ಮನೆಯ ಮುಂದೆ ಪ್ರಾಣಬಿಟ್ಟಿತು.” ಎಂಬ ವಿವರಗಳು ಎತ್ತ್‌ಪಾಟ್‌ನಲ್ಲಿ ದೊರಕುತ್ತವೆ.

ನೆಲ್ಲಕ್ಕಿ ನಡುಬಾಡೆಯಲ್ಲಿ ಇರಿಸಿರುವ ಪ್ಇಡ(ನಾಲ್ಕು ಕಾಲಿನ ಪೀಠ)ದಲ್ಲಿ ಕುಳಿತುಕೊಳ್ಳುವ ತೆರೆಕಾರನು ತೆರೆಹಾಡಿಗೆ ಅನುಗುಣವಾಗಿ ಚಲ್‌ಂಬು ಧರಿಸಿದ ತನ್ನ ಕಾಲನ್ನು ಕುಣಿಸುತ್ತಿರುತ್ತಾನೆ. ಹಾಡು ಕೊನೆಗೊಳ್ಳುತ್ತಿದ್ದಂತೆಯೇ ದೈವಾವೇಷಕ್ಕೆ ಒಳಗಾಗಿ ಪ್ಇಡದಿಂದ ಎದ್ದು ಎತ್ತಿನಂತೆ ಜಿಗಿಯುತ್ತಾನೆ. ಹೀಗೆ ಆವೇಶಗೊಂಡ ನಂತರ ಎತ್ತ್‌ತೆರೆಯು ಪುಂಡು ದನದಂತೆ ಎದುರಿಗೆ ಬಂದವರನ್ನು ಕೊಂಬಿನಿಂದ ತಿವಿಯುತ್ತಾ ಐನ್‌ಮನೆಯ ‘ಮುಂದ್’ನ ಸುತ್ತಲೂ ಕುಣಿಯುತ್ತದೆ. ನಂತರ ಮನೆಯ ಅಂಗಳಕ್ಕೆ ಜಿಗಿದು ಕೊಡವ ಸಾಂಪ್ರದಾಯಿಕ ವಾದ್ಯವಾದ ಕೊಂಬುಕೊಟ್ಟ್ ವಾಲಗಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತದೆ. ಅಂಗಳದಲ್ಲಿರುವ ಗಿಡಗಳನ್ನು ತಿನ್ನಲು ಹವಣಿಸುತ್ತದೆ. ಗಂಡಸರು ಅದನ್ನು ತಡೆಯಲು ಪ್ರಯತ್ನಿಸುತ್ತಾರೆ. ಅಂಗಳದಿಂದ ಹಾರಿ ಐನ್‌ಮನೆಯ ಜಗಲಿಯನ್ನು ಏರಿ ಪಡಸಾಲೆಯಲ್ಲಿ ನಿಂತಿರುವ ಜನರನ್ನು ತಿವಿಯಲು ಯತ್ನಿಸುತ್ತದೆ. ಸುರಿವ ಮಳೆಯನ್ನು ಲೆಕ್ಕಿಸದೆ ಕೆಸರಿನಲ್ಲಿ ಕುಣಿದು ಸಂಭ್ರಮಿಸುತ್ತದೆ. ಸುಮಾರು ಅರ್ಧ ಗಂಟೆಯ ಹೊತ್ತು ನಡೆಯುವ ಎತ್ತ್‌ತೆರೆಯಲ್ಲಿ ಭಕ್ತಿಯ ಭಾವಕ್ಕಿಂತ ವಿನೋದವೇ ಪ್ರಧಾನವಾಗಿ ಗೋಚರಿಸುತ್ತದೆ. ಅಂಗಳದಲ್ಲಿ ಕುಣಿದ ನಂತರ ಗದ್ದೆಗೆ ತೆರಳಿ ಯಾಕ ಗದ್ದೆಯೊಳಗೆ ಇಳಿದು ಓಡಾಡುತ್ತದೆ. ಅಲ್ಲಿರುವ ಬತ್ತದ ಪೈರನ್ನು ತಿನ್ನುವಂತೆ ನಟಿಸುತ್ತದೆ. ತೆರೆಕಾರನ ಸಹಾಯಕರು ಹಾಗೂ ತೆರೆ ಆಚರಣೆ ನಡೆಸುವ ಕುಟುಂಬದವರು ತಟ್ಟಿತಡೆಯೊಂದಿಗೆ ಗದ್ದೆಗೆ ತೆರಳುತ್ತಾರೆ. ಅಲ್ಲಿ ಕೋಳಿ ಬಲಿ ನೀಡುವುದರ ಮೂಲಕ ತೆರೆ ಮುಕ್ತಾಯಗೊಳ್ಳುತ್ತದೆ.

"ಕ್ರೂರ ಪ್ರಾಣಿಗಳ ಅಂತರ್ಯಾಮಿ ಶಕ್ತಿಗಳನ್ನು ಪೂಜಿಸುವುದೂ ನಿರ್ದಿಷ್ಟ ಪ್ರಾಣಿಗಳ ಕೆಲವೊಂದು ಸ್ವರೂಪ, ಸ್ವಭಾವಗಳನ್ನು ತಮ್ಮ ವ್ಯಕ್ತಿತ್ವಕ್ಕೆ ಆರೋಪಿಸಿಕೊಳ್ಳುವುದೂ ಅಭಿನಯಿಸುವುದೂ ವಿವಿಧ ಪ್ರಾಚೀನ ಸಮಾಜಗಳಲ್ಲಿ ರೂಢವಾಗಿದ್ದ ವಿಚಾರ."[೨] ಇದಕ್ಕೆ ಪೂರಕವಾಗಿರುವಂತಹ ನರಿಪೂದ ತೆರೆಯನ್ನು ಕೊಡವ ಜನಪದರು ಆಚರಿಸುತ್ತಾರೆ. ಕೊಡವ ಭಾಷೆಯಲ್ಲಿ 'ನರಿ' ಎಂದರೆ ಹುಲಿ ಎಂದು ಅರ್ಥ. ಕೊಡಗಿನ ನರಿಪೂದ ತೆರೆಕಟ್ಟುವ ಆಚರಣೆಯಲ್ಲಿ ಹುಲಿಯ ಅಂತರ್ಯಾಮಿ ಶಕ್ತಿಯ ಆರಾಧನೆ ನಡೆಯುತ್ತದೆ. ತೆರೆಕಾರನು ಹುಲಿಯನ್ನು ಹೋಲುವ ಬಣ್ಣಗಾರಿಕೆ ಮತ್ತು ವೇಷವನ್ನು ಧರಿಸಿ ಅದರ ಶಕ್ತಿಯನ್ನು ಮೈಮೇಲೆ ಆವಾಹಿಸಿಕೊಳ್ಳುತ್ತಾನೆ.

ಕೊಡಗಿನ ವಿರಾಜಪೇಟೆ ತಾಲೂಕಿನ ಕೆಲವೇ ಕೆಲವು ಕುಟುಂಬಗಳು ನರಿಪೂದ ತೆರೆಕಟ್ಟುವ ಆಚರಣೆಯನ್ನು ನಡೆಸುತ್ತವೆ. ಈ ತೆರೆಯನ್ನು ಆಚರಿಸಲು ಒಂದು ಹಿನ್ನೆಲೆ ಅವಶ್ಯಕ. ಒಂದು ಒಕ್ಕ (ಕುಟುಂಬ)ದಲ್ಲಿ ವ್ಯಕ್ತಿಯೊಬ್ಬ ಹುಲಿಯ ಧಾಳಿಯಿಂದ ಮೃತನಾಗಿದ್ದರೆ ಆ ಒಕ್ಕದವರು ಈ ಆಚರಣೆಯನ್ನು ನಡೆಸುತ್ತಾರೆ. ವಿರಾಜಪೇಟೆ ತಾಲೂಕು ಬಿ. ಶೆಟ್ಟಿಗೇರಿ ಗ್ರಾಮದ ಕಡೇಮಾಡ ಕುಟುಂಬ, ನಡಿಕೇರಿ ಗ್ರಾಮದ ಕೋಳೇರ ಕುಟುಂಬ, ಹಳ್ಳಿಗಟ್ಟು ಗ್ರಾಮದ ಅಜ್ಜಿಯಂಡ ಕುಟುಂಬಗಳು ಈ ಆಚರಣೆಯನ್ನು ನಡೆಸುತ್ತವೆ.

**ಆಯುಧ ಪೂಜೆ**

ಕೊಡಗಿನ ಸಂಸ್ಕೃತಿಯಲ್ಲಿ ಆಯುಧಗಳಿಗೆ ಹೆಚ್ಚು ಮಹತ್ವವಿದೆ. ಆಯುಧಪೂಜೆಯಾಗಿ ಕೈಲ್‌ಪೊಳ್ದ್ ಹಬ್ಬವು ಆಚರಣೆಗೊಳ್ಳುತ್ತದೆ. ತೆರೆಆಚರಣೆಯಲ್ಲಿ ಆಯುಧಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಈ ಸಂದರ್ಭದಲ್ಲಿ ಖಡ್ಗ, ಕತ್ತಿ, ಕಡತಲೆ, ಗುರಾಣಿ, ಬೆತ್ತ ಇತ್ಯಾದಿ ಆಯುಧಗಳನ್ನು ಶುದ್ಧ ಮುದ್ರಿಕೆಯಲ್ಲಿ ಕೋಟದಿಂದ ಹೊರತರಲಾಗುತ್ತದೆ. ಆಯುಧಗಳಿಗೆ ನಮಸ್ಕರಿಸಿ ತೆರೆಕಾರನು ಅವುಗಳನ್ನು ಕೈಗೆತ್ತಿಕೊಳ್ಳುತ್ತಾನೆ. ಆಚರಣೆಯ ವಿವಿಧ ಸ್ಥರಗಳಲ್ಲಿ ಆಯುಧಗಳು ತೆರೆಕಾರನ ಕೈಯಲ್ಲಿದ್ದು ಮತ್ತೆ ಹಿಂದಿರುಗುತ್ತವೆ.

ಆಯುಧಗಳನ್ನು ಹಿಡಿದುಕೊಳ್ಳುವ ತೆರೆಕಾರನು ದೈವಾವೇಶಕ್ಕೆ ಒಳಗಾಗುತ್ತಾನೆ. ದೈವವು ಆವೇಶಗೊಂಡ ನಂತರ ಆಯುಧಗಳನ್ನು ಭಕ್ತರ ಕೈಗೆ ಮುಟ್ಟಿಸಿ, ತಲೆಯ ಮೇಲಿಟ್ಟು ಅನುಗ್ರಹಿಸುತ್ತದೆ. ಆಯುಧಗಳನ್ನು ಕೆಳಗೆ ಇಟ್ಟಾಗ ಆವೇಶವು ನಿಲ್ಲುತ್ತದೆ. ಈ ಆಯುಧಗಳು ಅತ್ಯಂತ ಪವಿತ್ರವಾಗಿರುತ್ತವೆ ಎಂಬುದು ಜನಪದರ ನಂಬಿಕೆಯಾಗಿದೆ. ತೆರೆ ದೈವಗಳ ಅಲೌಕಿಕತೆ ಹಾಗೂ ತೆರೆಕಾರನ ಆವೇಶಕ್ಕೂ ದೈವಗಳ ಆಯುಧಗಳಿಗೂ ಸಾಂಸ್ಕೃತಿಕವಾದ ಸಂಬಂಧಗಳು ಇವೆ.

**ಶಕ್ತಿ, ಚಾಮುಂಡಿ, ವೈಷ್ಣವ ಹಾಗೂ ಶೈವ ಕಲ್ಪನೆಗಳು**

ತೆರೆಕಟ್ಟುವ ಆಚರಣೆಯಲ್ಲಿ ಶಕ್ತಿ, ಚಾಮುಂಡಿ, ವೈಷ್ಣವ ಹಾಗೂ ಶೈವ ಕಲ್ಪನೆಗಳು ಮಿಳಿತಗೊಂಡಿವೆ. ಈ ಕಲ್ಪನೆಗಳು ಎರಡು ರೀತಿಯಲ್ಲಿ ಕಂಡುಬರುತ್ತವೆ. ಮೊದಲ ರೀತಿಯಲ್ಲಿ ಮೇಲೆ ಉಲ್ಲೇಖಿಸಿದ ದೇವತೆಗಳು ತೆರೆದೈವಗಳಾಗಿ ಅವತರಿಸುತ್ತವೆ. ಉದಾ. ಶಕ್ತಿಯ ಅವತಾರವಾದ ರಕ್ತಬೀಜಾಸುರ ಸಂಹಾರಿಣಿ ಪುಲಿ ಚೌಂಡಿಯಾಗಿ ಕಾಣಿಸಿಕೊಳ್ಳುತ್ತದೆ. ಚಾಮುಂಡಿಯು ಚೌಂಡಿಯಾಗಿ, ವಿಷ್ಣುವಿನ ನರಸಿಂಹ ಅವತಾರವು ವಿಷ್ಣುಮೂರ್ತಿ ದೈವವಾಗಿ ಪೂಜಿಸಲ್ಪಡುತ್ತದೆ. ಶಿವನ ದಲಿತ ಅವತಾರವು ಪೊಟ್ಟ ದೈವವಾಗಿ ಆರಾಧಿಸಲ್ಪಡುತ್ತದೆ.

ಎರಡನೆಯ ವಿಧದಲ್ಲಿ ಶಕ್ತಿ, ಚಾಮುಂಡಿ, ವೈಷ್ಣವ ಹಾಗೂ ಶೈವ ಕಲ್ಪನೆಗಳು ಜನಪದ ಐತಿಹ್ಯಗಳನ್ನು ಬೆರೆಸಿಕೊಂಡು ಬಂದಿರುತ್ತವೆ. ನುಚ್ಚುಟೆ ಅಥವಾ ನುಚ್ಚುಟಮ್ಮೆ ಒಬ್ಬ ಸಾಮಾನ್ಯ ಬ್ರಾಹ್ಮಣ ಮಹಿಳೆ. ಮರಣಾನಂತರ ಆಕೆ ದೈವವಾಗಿ ಪಾರ್ವತಿಯ ಅಂಶವಾದಳು ಎಂಬ ನಂಬಿಕೆ ಜನಪದರಲ್ಲಿದೆ. ಐತಿಹ್ಯ ಹಾಗೂ ನಂಬಿಕೆಗಳಲ್ಲಿ ಈ ರೀತಿಯ ಪ್ರಭಾವಗಳು ಕಂಡುಬರುತ್ತವೆ. ಆದರೆ ತೆರೆ ಆಚರಣೆಯಲ್ಲಿ ಇಂತಹ ಯಾವುದೇ ಪ್ರಭಾವಗಳು ಕಂಡುಬರುವುದಿಲ್ಲ.

**ಫಲವಂತಿಕೆಯ ಪೂಜೆ**

ಸಮೃದ್ಧಿ ಹಾಗೂ ಫಲವಂತಿಕೆಗಾಗಿ ನಡೆಸುವ ಪೂಜೆಯು ತೆರೆಕಟ್ಟುವ ಆಚರಣೆಯಲ್ಲಿ ಕಂಡುಬರುತ್ತದೆ. ನಿಸರ್ಗದ ಆರಾಧಕರಾಗಿರುವ ಕೊಡಗಿನ ಜನಪದರು ಕೃಷಿಯನ್ನು ಪ್ರಧಾನವಾಗಿ ನಂಬಿರುವವರು. ಇಲ್ಲಿ ಹೆಣ್ಣು ಮತ್ತು ಮಣ್ಣಿನ ಫಲವಂತಿಕೆಯ ಪೂಜೆ ನಡೆಯುತ್ತದೆ. ಈ ಎರಡು ಫಲವಂತಿಕೆಗಳು ಪರಸ್ಪರ ಸಂಬಂಧವನ್ನು ಹೊಂದಿದ್ದು; ಇವುಗಳ ಆಶಯವು ಒಂದೇ ಆಗಿದೆ.

ತೆರೆ ಆಚರಣೆಯಲ್ಲಿ ಪೂಜಾದ್ರವ್ಯ ಹಾಗೂ ಪೂಜೆಯ ಪರಿಕರಗಳಾಗಿ ಬತ್ತವು ಬಳಕೆಯಾಗುತ್ತದೆ. ಅಕ್ಕಿಯನ್ನು ಅದರ ನಿಜರೂಪದಲ್ಲಿ, ಆಹಾರ ಪದಾರ್ಥವಾಗಿ ಹಾಗೂ ಸಾಂಕೇತಿಕವಾಗಿಯೂ ಬಳಸಲಾಗುತ್ತದೆ. ಅಕ್ಕಿಯನ್ನು ಗಣೋದಿಯಾಗಿ ಇರಿಸಲಾಗುತ್ತದೆ. ತೆರೆಕುರಿಪೊ, ಎಣ್ಣೆ ಕೊಡ್‌ಪೊ, ತಲಪಾಳಿ ಕೆಟ್ಟುವೊ, ಚಲ್‌ಂಬು ಧರಿಸುವುದು ಹಾಗೂ ಮುಡಿ ಎಡ್‌ಪೊ ವಿಧಿಗಳಲ್ಲಿ ಅಕ್ಕಿಯನ್ನು ಅಕ್ಷತೆಯ ರೂಪದಲ್ಲಿ ಎಸೆಯಲಾಗುತ್ತದೆ. ಇದು ಸಮೃದ್ಧಿ ಹಾಗೂ ಫಲವಂತಿಕೆಯ ಪೂಜೆಗೆ ಸಂಬಂಧಿಸಿದ್ದಾಗಿದೆ. ಈತ್‌ಕುಳಿಯ ಹಾಗು ಚೌಂಡಿ ದೈವಗಳು ಫಲವಂತಿಕೆಯ ದೈವಗಳಾಗಿವೆ. ಇವುಗಳು ಫಲವಂತಿಕೆಯ ಸಂಕೇತವಾದ ಹಾಲು ಒಸರುವ ಮರಗಳಡಿಯಲ್ಲಿ ನೆಲೆಸಿರುತ್ತವೆ. ಫಲ ಸಮೃದ್ಧಿಯ ಸಂಕೇತವಾದ ತೆನೆಹಬ್ಬ ಅಥವಾ ಕದಿರುಕಟ್ಟುವ ಹಬ್ಬದ ಆಚರಣೆ ಅನೇಕ ಕಡೆಗಳಲ್ಲಿ ರೂಢಿಯಲ್ಲಿದೆ. ಕೊಡಗಿನಲ್ಲಿ ಹೊಸ ಬತ್ತವನ್ನು ಮನೆಗೆ ತರುವ ಪುತ್ತರಿ ಹಬ್ಬವು ಫಲವಂತಿಕೆಯ ಆಚರಣೆಯೇ ಆಗಿದೆ. ಹೀಗೆ ವಿಭಿನ್ನ ಆರಾಧನೆಗಳ ಸಮನ್ವಯತೆಯನ್ನು ತೆರೆಕಟ್ಟುವ ಆಚರಣೆಯಲ್ಲಿ ಕಾಣಬಹುದಾಗಿದೆ. ಆರಂಭಿಕ ಹಂತದಲ್ಲಿ ಆದಿಮ ಸಂಸ್ಕೃತಿಯ ಆಚರಣೆಗಳನ್ನು ಹೊಂದಿದ್ದ ತೆರೆಕಟ್ಟುವ ಆಚರಣೆಯು ಸಾಂಸ್ಕೃತಿಕ ವಿಕಾಸದ ಹಂತಗಳಲ್ಲಿ ವಿಭಿನ್ನ ಆರಾಧನಾ ಪದ್ಧತಿಗಳನ್ನು ಸ್ವೀಕರಿಸಿಕೊಂಡಿರಬೇಕು.

**ಕೊನೆ ಟಿಪ್ಪಣಿ**

೧. ಮೊಗಳ್ಳಿ ಗಣೇಶ್., ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.೨೫
೨. ೨. ಅಮೃತ ಸೋಮೇಶ್ವರ., ತುಳುವ ಜಾನಪದ: ಕೆಲವು ನೋಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೭, ಪು. ೬೯

**ಪರಾಮರ್ಶನ ಗ್ರಂಥಗಳು**

೧. ಅಮೃತ ಸೋಮೇಶ್ವರ. ತುಳುವ ಜಾನಪದ: ಕೆಲವು ನೋಟಗಳು. ಹಂಪಿ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ೨೦೦೭
೨. ನಡಿಕೇರಿಯಂಡ ಚಿಣ್ಣಪ್ಪ. (ಸಂ) ಪಟ್ಟೋಲೆ ಪಳಮೆ. ಮಡಿಕೇರಿ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ. ೨೦೦೨
೩. ಮೊಗಳ್ಳಿ ಗಣೇಶ್, ದೇಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
೪. ಹೆಬ್ಬಾಲೆ ಕೆ. ನಾಗೇಶ್. ಕಾವೇರಿ ಜಾನಪದ. ಹಂಪಿ.

ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ೨೦೦೫

5. ೫. ಡಾ. ಹೆಬ್ಬಾಲೆ ಕೆ. ನಾಗೇಶ್(ಸಂ) ಜಾನಪದ ಕರ್ನಾಟಕ. ಹಂಪಿ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ೨೦೦೬